ಆರೋಗ್ಯ ಯೋಜನೆಗಳ ಅನುಷ್ಠಾನ

1601(1928); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ಪ್ರಸಕ್ತ ಸಾಲಿನಲ್ಲಿ ಆರೋಗ್ಯ ಇಲಾಖೆಯಲ್ಲಿ ಜಾರಿಯಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಗಳು ಯಾವುವು; ಈ ಯೋಜನೆಗಳಿಂದ ದೊರೆಯುತ್ತಿರುವ ಪ್ರಯೋಜನೆಗಳೇನು;

ಆ) ಕಳೆದ ಒಂದು ವರ್ಷದ ಅವಧಿಯಲ್ಲಿ ಆರೋಗ್ಯ ಇಲಾಖೆಗೆ ಬಜೆಟ್‌ನಲ್ಲಿ ಒದಗಿಸಲಾಗಿದ್ದ ಅನುದಾನವೆಷ್ಟು; ಇದೇ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವ ನೆರವಿನ ಮೊತ್ತವೆಷ್ಟು;

ಇ) ಈ ಎರಡು ಅನುದಾನದಲ್ಲಿ ಇಲ್ಲಿಯವರೆವಿಗೆ ಪ್ರತಿ ಜಿಲ್ಲೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಗಳ ಅನುಷ್ಠಾನಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು; ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಆರೋಗ್ಯ ಭಾಗ್ಯ ಯೋಜನೆಗಳಿಂದ ಕಳೆದ ಒಂದು ವರ್ಷದ ಅವಧಿಯಲ್ಲಿ ಎಷ್ಟು ಜನರು ಯಾವ ಯಾವ ರೀತಿಯ ಅನುಕೂಲಗಳನ್ನು ಪಡೆದುಕೊಂಡಿದ್ದಾರೆ; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮತ್ತು ಆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಜಾರಿಯಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪ್ರಮುಖ ಯೋಜನೆಗಳ ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ ಮತ್ತು ಯೋಜನಾ ಕಾರ್ಯಕ್ರಮಗಳಿಗೆ ನಿಗದಿಯಾದ ಅನುದಾನ, ಮಾಡಲಾದ ವಿವರವನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಆಯುಷ್ ಇಲಾಖೆ

ಆಯುಷ್ ಇಲಾಖೆಯಲ್ಲಿ ಆರೋಗ್ಯ ಮತ್ತು ಐ.ಇ.ಸಿ.ತರಬೇತಿ ಯೋಜನೆಯಡಿ ಮನೆಮದ್ದು, ಆರೋಗ್ಯ ಶಿಬಿರ, ಯೋಗ ತರಬೇತಿ ಶಿಬಿರಗಳು ಮತ್ತು ಆರೋಗ್ಯ ಮೇಳ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕೇಂದ್ರ ಸರ್ಕಾರವು ಆಯುಷ್ ಸೇವೆಗಳು, ಆಯುಷ್ ಶೈಕ್ಷಣಿಕ ಸಂಸ್ಥೆಗಳ ಅಭಿವೃದ್ಧಿ, ಆಯುಷ್ ಔಷಧಿಗಳ ಗುಣಮಟ್ಟ ನಿಯಂತ್ರಣ ಮತ್ತು ಔಷಧಿ ಸಸ್ಯಗಳ ಅಭಿವೃದ್ಧಿಗಾಗಿ ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆ ಪ್ರಾರಂಭ ಮಾಡಿದ್ದು, ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಲ್ಲಿ ಅನುದಾನ ನಿಗದಿಪಡಿಸಿಲ್ಲ.

2014–15ನೇ ಸಾಲಿನಲ್ಲಿ ಆಯುಷ್ ಇಲಾಖೆಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆಯಾಗಿದೆ.

(ರೂ. ಲಕ್ಷಗಳಲ್ಲಿ)

ಯೋಜನೆ	ಯೋಜನೇತರ	ಕೇಂದ್ರ ಸರ್ಕಾರ
5019.09	9049.00	–

ಇ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ನಿಗದಿಯಾದ ಕಾರ್ಯಕ್ರಮಗಳು, ಮಾಡಲಾದ ವೆಚ್ಚವನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ವಿವಿಧ ಯೋಜನೆಗಳ ಫಲಾನುಭವಿಗಳು (ಒಟ್ಟು ಫಲಾನುಭವಿಗಳ ಸಂಖ್ಯೆ)

ಕ್ರ.ಸಂ.	ಕಾರ್ಯಕ್ರಮಗಳು	2014–15 (ಡಿಸೆಂಬರ್–2014 ರವರೆಗೆ)
1	ಪ್ರಸೂತಿಆರೈಕೆ	223648
2	ಮಡಿಲು	239202
3	ತಾಯಿಭಾಗ್ಯ	28726
4	ಹೆಚ್ಚುವರಿತಾಯಿಭಾಗ್ಯ	5429
5	ಜನನಿ ಸುರಕ್ಷಾ ಯೋಜನೆ	305775
6	ವಾಜಪೇಯ ಆರೋಗ್ಯ ಶ್ರೀ	27859
7	ಆರೋಗ್ಯ ಕವಚ	455534
8	ಹಿರಿಯ ನಾಗರೀಕರಿಗೆ ಚಿಕಿತ್ಸೆ	72542
9	ಟೆಲಿಮೆಡಿಸಿನ್	28416
10	ಸುಟ್ಟಗಾಯಕ್ಕೆ ಚಿಕಿತ್ಸೆ	732
11	ಡಯಾಲಿಸೀಸ್	5331
12	ಸುವರ್ಣ ಆರೋಗ್ಯ ಚೈತನ್ಯ	559

ಆಯುಷ್ ಇಲಾಖೆಗೆ ಸಂಬಂಧಿಸಿದಂತೆ, ನಿಗದಿಯಾದ ಕಾರ್ಯಕ್ರಮಗಳು, ಮಾಡಲಾದ ವೆಚ್ಚ ಮತ್ತು ಫಲಾನುಭವಿಗಳ ವಿವರವನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಡಾ॥ಗುರುಪಾದಪ್ಪ ನಾಗಮಾರಪಳ್ಳಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1928ಕ್ಕೆ ಅನುಬಂಧ–1

ಆರೋಗ್ಯ ಇಲಾಖೆಯಲ್ಲಿ ಜಾರಿಯಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪ್ರಮುಖ ಯೋಜನೆಗಳ ವಿವರ

- **ತಾಯಿಭಾಗ್ಯ ಯೋಜನೆ:–** ಹಿಂದುಳಿದ ಜಿಲ್ಲೆಗಳಾದ ಬೀದರ್, ಗುಲ್ಬರ್ಗ, ಯಾದಗೀರ್, ರಾಯಚೂರು, ಕೊಪ್ಪಳ, ಬಾಗಲಕೋಟೆ, ಬಿಜಾಪುರ ಮತ್ತು ಚಾಮರಾಜನಗರಗಳಲ್ಲಿ ಗರ್ಭಿಣಿ ಸ್ತ್ರೀಯರ ಹಾಗೂ ನವಜಾತ ಶಿಶುಗಳ ಮರಣ ಪ್ರಮಾಣ ಕಡಿಮೆ ಮಾಡುವ ಉದ್ದೇಶದಿಂದ ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಸ್ತ್ರೀಯರಿಗೆ ಮನ್ನಣೆ ಪಡೆದ ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಉಚಿತ ಹೆರಿಗೆ ಸೌಲಭ್ಯವನ್ನು ನೀಡುವ ಯೋಜನೆಯಾಗಿದೆ. ಖಾಸಗಿ ವೈದ್ಯಕೀಯ ಸಂಸ್ಥೆಯಲ್ಲಿ ಶಸ್ತ್ರಚಿಕಿತ್ಸೆ ಒಳಗೊಂಡಂತೆ 100 ಹೆರಿಗೆಗಳಾದಲ್ಲಿ ಅದಕ್ಕೆ 3 ಲಕ್ಷ ರೂಪಾಯಿಗಳನ್ನು ಪ್ರೋತ್ಸಾಹ ಧನವನ್ನಾಗಿ ಪಾವತಿಸಲಾಗುತ್ತದೆ.

  ಹೆಚ್ಚುವರಿ ತಾಯಿ ಭಾಗ್ಯ:– ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಭಾಗದ ಅರ್ಹ ತಾಯಂದಿರು (ಪರಿಶಿಷ್ಟ ಜಾತಿ/ಪಂಗಡ ಸೇರಿದಂತೆ) ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಂಡಲ್ಲಿ ರೂ. 1000 ನಗದು ಉತ್ತೇಜನ ಹಣವನ್ನು ನೀಡಲಾಗುತ್ತಿದೆ. ಈ ಯೋಜನೆಯು 2010–11 ನೇ ಸಾಲಿನಿಂದ ಜಾರಿಗೆ ಬಂದಿದ್ದು.

- **ಪ್ರಸೂತಿ ಆರೈಕೆ:–** ಈ ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವ ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಮಹಿಳೆಯರಿಗೆ ಅಗತ್ಯ ಪೌಷ್ಠಿಕಾಂಶಗಳ ನೆರವನ್ನು ಪಡೆಯಲು ರೂ. 2000 (ಜನನಿ ಸುರಕ್ಷಾ ಯೋಜನೆಯ ಅನುದಾನವೂ ಸೇರಿ) ಉತ್ತೇಜನ ಹಣವನ್ನು ನೀಡಲಾಗುತ್ತಿದೆ.

- **ಮಡಿಲು:–** ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವ ಬಡತನ ರೇಖೆಗಿಂತ ಕೆಳಗಿರುವ ಪ್ರತಿಯೊಬ್ಬ ತಾಯಿಗೆ 20 ಸಾಮಗ್ರಿಗಳ ಒಂದು ಆರೋಗ್ಯ ಕಿಟ್‌ನ್ನು ನೀಡಲಾಗುತ್ತಿದೆ.
- **ವಾಜಪೇಯಿ ಆರೋಗ್ಯ ಶ್ರೀ:–** ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರು ಕ್ಲಿಷ್ಟಕರವಾದ ರೋಗಗಳಿಗೆ ತುತ್ತಾದಾಗ ಉಂಟಾಗುವ ತೊಂದರೆಯನ್ನು ನಿವಾರಿಸಲು "ವಾಜಪೇಯಿ ಆರೋಗ್ಯ ಶ್ರೀ" ಎಂಬ ಆರೋಗ್ಯ ಚಿಕಿತ್ಸಾ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯ ಅಡಿಯಲ್ಲಿ ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡ ವೈಫಲ್ಯ, ಸುಟ್ಟಗಾಯಗಳು, ಪಾಲಿಟ್ರಾಮ ಮುಂತಾದ 402 ಶಸ್ತ್ರ ಚಿಕಿತ್ಸೆಗಳಿಗೆ ರೂ. 2.00 ಲಕ್ಷದ ವರೆಗೆ ಫ್ಯಾಮಿಲಿ ಫ್ಲೋಟರ್ ಆಧಾರದ ಮೇಲೆ ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ.
- **ಆರೋಗ್ಯ ಸಹಾಯ ವಾಣಿ (104):–** ಸಾರ್ವಜನಿಕರು ರಾಜ್ಯದ ಯಾವುದೇ ಭಾಗದಿಂದ ಶುಲ್ಕರಹಿತ ದೂರವಾಣಿ ಸಂಖ್ಯೆ 104 ಕ್ಕೆ ಕರೆಮಾಡಿ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಈ ಸೇವೆಯು ದಿನದ 24 ಗಂಟೆ ಹಾಗೂ ವರ್ಷದ 365 ದಿನಗಳು ಲಭ್ಯವಿರುತ್ತದೆ. ಈ ಆರೋಗ್ಯವಾಣಿ ಆರಂಭವಾದಾಗಿನಿಂದ ಸರಾಸರಿ ದಿನಕ್ಕೆ 4,700 ಕರೆಗಳನ್ನು ಸ್ವೀಕರಿಸಿ ಸೂಕ್ತ ಸಲಹೆ ನೀಡಲಾಗುತ್ತಿದೆ .
- **ಜನನಿ ಸುರಕ್ಷಾ ಯೋಜನೆ:–** ಈ ಯೋಜನೆಯು ಭಾರತ ಸರ್ಕಾರದ ಯೋಜನೆಯಾಗಿದ್ದು, ಹೆರಿಗೆಗಾಗಿ ನೀಡುವ ಆರ್ಥಿಕ ಸಹಾಯದ ಉದ್ದೇಶವನ್ನು ಹೊಂದಿರುತ್ತದೆ. ಈ ಯೋಜನೆಯಡಿಯಲ್ಲಿ ಮನೆ ಹೆರಿಗೆಗೆ ರೂ. 500 ಸಾಂಸ್ಥಿಕ ಹೆರಿಗೆಗೆ (ನಗರ ಪ್ರದೇಶ): ರೂ. 600, ಸಾಂಸ್ಥಿಕ ಹೆರಿಗೆಗೆ (ಗ್ರಾಮೀಣ): ರೂ. 700 ಹಾಗೂ ಕರಾರು ಮಾಡಿಕೊಂಡಿರುವ ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಲ್ಲಿ ರೂ. 1500. ನೀಡಲಾಗುತ್ತಿದೆ.

- **ಜನನಿ ಶಿಶು ಸುರಕ್ಷಾ ಕಾರ್ಯಕ್ರಮ:–** ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಪ್ರತೀ ಗರ್ಭಿಣಿ ಸ್ತ್ರೀಗೆ ಅಗತ್ಯವಿರುವ ಪ್ರಸೂತಿ ಪೂರ್ವ, ಪ್ರಸೂತಿ ವೇಳೆ ಮತ್ತು ಪ್ರಸೂತಿ ನಂತರದ ಸೇವೆಗಳು ಹಾಗೂ ಶಿಶುವಿಗೆ ಒಂದು ವರ್ಷದವರೆಗೆ ಉಚಿತ ಸೇವೆಯನ್ನು ನೀಡಲು ಹಾಗೂ ಸಾಂಸ್ಥಿಕ ಹೆರಿಗೆಗಳನ್ನು ಹೆಚ್ಚಳ ಮಾಡಲು "ಜನನಿ ಶಿಶು ಸುರಕ್ಷಾ ಕಾರ್ಯಕ್ರಮ" ಎಂಬ ವಿನೂತನ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ಸೇರಿದ ಆಸ್ಪತ್ರೆಗಳಲ್ಲಿ ಈ ಸೌಲಭ್ಯವು ಎಲ್ಲ ವರ್ಗದ ಜನರಿಗೂ ಉಚಿತವಾಗಿ ದೊರೆಯುತ್ತದೆ.
- **ಸುವರ್ಣ ಆರೋಗ್ಯ ಚೈತನ್ಯ:–** ಈ ಯೋಜನೆಯಡಿ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿನ ಮಕ್ಕಳನ್ನು ಆರೋಗ್ಯ ತಪಾಸಣೆಗೆ ಒಳಪಡಿಸಿ, ಅವರಿಗೆ ಶಸ್ತ್ರ ಚಿಕಿತ್ಸೆಯು ಅವಶ್ಯವಿದ್ದಲ್ಲಿ ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ.
- **ಆರೋಗ್ಯ ಬಂಧು ಯೋಜನೆ:–** ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅವಶ್ಯವಿರುವ ಸಿಬ್ಬಂದಿಯನ್ನು ಒದಗಿಸಲು ಸಾಧ್ಯವಾಗದ ಕಡೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ನೆರವಿನೊಂದಿಗೆ ಆರೋಗ್ಯ ಸೇವೆಯನ್ನು ಒದಗಿಸಲು ಆರೋಗ್ಯ ಬಂಧು ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲಾಗಿದೆ.
- **24 X 7 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಎಫ್.ಆರ್.ಯು. ಗಳು:–** ರಾಜ್ಯದಲ್ಲಿ 1018 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ದಿನದ 24 ಗಂಟೆ ಆರೋಗ್ಯ ಸೇವೆ ಒದಗಿಸುವ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ. ಅದರಂತೆಯೇ 192 ಸಮುದಾಯ ಆರೋಗ್ಯ ಕೇಂದ್ರಗಳನ್ನು ಎಫ್.ಆರ್.ಯು. (First Referral Unit) ಗಳನ್ನಾಗಿ ಪರಿವರ್ತಿಸಿದ್ದು, ಈ ಕೇಂದ್ರಗಳಲ್ಲಿ ಸ್ತ್ರೀರೋಗ, ಅರವಳಿಕೆ ಮತ್ತು ಮಕ್ಕಳ ತಜ್ಞರ ಸೇವೆ ಒದಗಿಸಲಾಗುತ್ತಿದೆ.

- **ಅಪೌಷ್ಟಿಕತೆ ಗುಣಪಡಿಸುವ ಕಾರ್ಯಕ್ರಮ:–** ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಎನ್.ಕೆ.ಪಾಟೀಲ್ ಇವರ ಅಪೌಷ್ಟಿಕತೆಯ ಸಮಿತಿಯು ನೀಡಿರುವ ಶಿಫಾರಸ್ಸಿನಂತೆ ರಾಜ್ಯದಲ್ಲಿ 30 ಮಕ್ಕಳ ಆರೋಗ್ಯ ಪುನಶ್ಚೇತನ ಕೇಂದ್ರಗಳು (ಎನ್.ಆರ್.ಸಿ.) (28 ಕೇಂದ್ರಗಳು ರಾಜ್ಯ ಸರ್ಕಾರದ ವತಿಯಿಂದ ಹಾಗೂ 2 ಕೇಂದ್ರಗಳನ್ನು ರಾ.ಗ್ರಾ.ಆ.ಅ.) ಹಾಗೂ 27 ಪರಿವರ್ತಿತ ಮಕ್ಕಳ ಆರೋಗ್ಯ ಪುನಶ್ಚೇತನ ಕೇಂದ್ರಗಳನ್ನು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಅನುದಾನದಡಿ ಸ್ಥಾಪಿಸಲಾಗಿದೆ.
- **ಪಲ್ಸ್ ಪೋಲಿಯೋ ಕಾರ್ಯಕ್ರಮ:–** ಪೋಲಿಯೋ ರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಸದುದ್ದೇಶದಿಂದ ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು 1995–96 ರಿಂದ ಸತತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ವರ್ಷವು ಎರಡು ಸುತ್ತುಗಳಲ್ಲಿ ಪಲ್ಸ್ ಪೋಲಿಯೋ ಹನಿಗಳನ್ನು ಎಲ್ಲಾ 5 ವರ್ಷದೊಳಗಿನ ಮಕ್ಕಳಿಗೆ ಹಾಕಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.
- **ಎಂ.ಸಿ.ಟಿ.ಎಸ್:–** ತಾಯಿ ಮರಣ ಪ್ರಮಾಣ (ಎಂ.ಎಂ.ಆರ್) ಮತ್ತು ಶಿಶು ಮರಣ ಪ್ರಮಾಣವನ್ನು (ಐ.ಎಂ.ಆರ್) ಕಡಿಮೆ ಮಾಡುವ ಸಲುವಾಗಿ, ಗರ್ಭಿಣಿ ಮಹಿಳೆ ಮತ್ತು ಮಕ್ಕಳಿಗೆ ಆರೋಗ್ಯ ಇಲಾಖೆವತಿಯಿಂದ ಸೇವೆಗಳನ್ನು ನೀಡುವುದು ಹಾಗೂ ನೀಡಿದ ಸೇವೆಗಳನ್ನು ಅನುಸರಿಸುವ ಉದ್ದೇಶದಿಂದ ಆವಿಷ್ಕರಿಸಿದ ವ್ಯವಸ್ಥೆಯೇ ಎಂ.ಸಿ.ಟಿ.ಎಸ್ (ಮದರ್ ಅಂಡ್ ಚೈಲ್ಡ್ ಟ್ರ್ಯಾಕಿಂಗ್ ಸಿಸ್ಟಮ್) – ತಾಯಿ ಮತ್ತು ಮಗುವಿನ ಅನುಸರಣಾ ವ್ಯವಸ್ಥೆ. ಕರ್ನಾಟಕ ಸರ್ಕಾರವು ಎನ್.ಐ.ಸಿ ಬೆಂಗಳೂರು ಇವರ ಸಹಯೋಗದೊಂದಿಗೆ ರಾಜ್ಯದ ಅಗತ್ಯತೆಗೆ ಅನುಗುಣವಾಗಿ ಎಂ.ಸಿ.ಟಿ.ಎಸ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಜನವರಿ 2011ರಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸಿದೆ. ರಾಜ್ಯದಲ್ಲಿನ ಪ್ರತಿ ಗರ್ಭಿಣಿ ಸ್ತ್ರೀಗೂ ಪ್ರತ್ಯೇಕ ಗುರುತಿನ ಸಂಖ್ಯೆಯುಳ್ಳ ತಾಯಿ

ಕಾರ್ಡನ್ನು ವಿತರಿಸಿ, ಸದರಿ ತಾಯಿ ಕಾರ್ಡ್‌ನಲ್ಲಿ ಗರ್ಭಿಣಿ ಸ್ತ್ರೀಯನ್ನು ಗುರುತಿಸಲು ಹಾಗೂ ಅನುಸರಿಸಲು ಅಗತ್ಯವಾದ ಮಾಹಿತಿಗಳನ್ನು ಸಂಗ್ರಹಿಸಿ ಎಂಸಿಟಿಎಸ್ ಪೋರ್ಟಲ್‌ನಲ್ಲಿ ಅಳವಡಿಸುವುದು. ನಂತರ ಆಕೆಗೆ ನಿಗದಿತ ಸಮಯದೊಳಗೆ ನೀಡಬೇಕಾದ ಸೇವೆಯನ್ನು ನೀಡುವಂತೆ ಸಂಬಂಧಿಸಿದ ಕಿರಿಯ ಆರೋಗ್ಯ ಸಹಾಯಕರಿಗೆ ತಿಳಿಸುವುದು ಮಾತ್ರವಲ್ಲದೇ ಗರ್ಭಿಣಿ ಸ್ತ್ರೀಗೂ ಆಕೆ ಪಡೆಯಬೇಕಾದ ಸೇವೆಯ ವಿವರವನ್ನು ಎಸ್.ಎಂ.ಎಸ್ ಮುಖೇನ ತಿಳಿಯಪಡಿಸುವುದು ಈ ವ್ಯವಸ್ಥೆಯ ಮುಖ್ಯವಾದ ಅಂಶವಾಗಿರುತ್ತದೆ ಹಾಗೂ ಕಿರಿಯ ಆರೋಗ್ಯ ಸಹಾಯಕರು ಗರ್ಭಿಣಿಯರಿಗೆ ಹಾಗೂ ಮಕ್ಕಳಿಗೆ ನೀಡಿದ ಸೇವೆಗಳ ಮಾಹಿತಿಯನ್ನು ಎಸ್.ಎಂ.ಎಸ್ ಮೂಲಕ ಎಂ.ಸಿ.ಟಿ.ಎಸ್ ಪೋರ್ಟಲ್‌ನಲ್ಲಿ ನವೀಕರಿಸಲಾಗುತ್ತಿದೆ. ಇಷ್ಟೇ ಅಲ್ಲದೇ ಗರ್ಭಿಣಿ ಹಾಗೂ ಮಗುವಿನ ಸೇವೆಗೆ ಸಂಬಂಧಿಸಿದಂತೆ ಕಿರಿಯ ಆರೋಗ್ಯ ಸಹಾಯಕರಿಗೆ ಕ್ರಿಯಾ ಯೋಜನೆಯನ್ನು ರೂಪಿಸುವುದು ಮತ್ತು ಆಕೆಯ ಕಾರ್ಯ ದಕ್ಷತೆಯನ್ನು ಕ್ಷೇತ್ರವಾರು ಯಾವುದೇ ಹಂತದ ಅಧಿಕಾರಿ ಪರಿವೀಕ್ಷಿಸಲು ಎಂ.ಸಿ.ಟಿ.ಎಸ್ ಅನುವು ಮಾಡಿಕೊಡುತ್ತದೆ.

- **ರಾಜೀವ್ ಆರೋಗ್ಯ ಭಾಗ್ಯ:–** ಬಿಪಿಎಲ್ ವರ್ಗಕ್ಕೆ ಸೇರದಿರುವ ವಿವಿಧ ಕಾರ್ಮಿಕ ವರ್ಗಗಳು ಹಾಗೂ ಜನ ಸಮುದಾಯಗಳು ಈಗ ಸುಸಜ್ಜಿತ ಮೇಲ್ದರ್ಜೆ ಆಸ್ಪತ್ರೆಯ ಆರೋಗ್ಯ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಈ ವರ್ಗದ ಜನರಿಗೂ ಸಹ ಇಂತಹ ಆರೋಗ್ಯ ಸವಲತ್ತುಗಳನ್ನು ಒದಗಿಸಲು ಆರೋಗ್ಯವಿಮೆ / ಭಾಗೀದಾರರ ಶೇಕಡ 30 ರಷ್ಟು ಕೊಡುಗೆಯನ್ನು ಆಧರಿಸಿ ಒಂದು ನೂತನ ಆರೋಗ್ಯ ಯೋಜನೆಯನ್ನು ರೂಪಿಸಲಾಗಿದೆ. 1.1 ಕೋಟಿ ಜನರಿಗೆ ಈ ಯೋಜನೆಯ ಸೌಲಭ್ಯವನ್ನು ನೀಡಲಾಗುವುದು. ಈ ಕಾರ್ಯಕ್ರಮವನ್ನು ಜಾರಿಗೊಳಿಸಿದಲ್ಲಿ ಉಚಿತ ಆರೋಗ್ಯ ಸೇವೆ ಒದಗಿಸುವ ಮೂಲಕ Tertiary ಖಾಯಿಲೆಗಳಿಗೆ ಸಂಬಂಧಿಸಿದಂತೆ

ದೇಶದಲ್ಲೇ Universal Health Coverage ನೀಡುವ ಪ್ರಥಮ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗುತ್ತದೆ.

- **ಋತುಚಕ್ರ ಸಂದರ್ಭದಲ್ಲಿ ಶುಚಿತ್ವ:–** 32.50 ಲಕ್ಷ ಯುವತಿಯರಿಗೆ ಋತುಚಕ್ರ ಸಂದರ್ಭದಲ್ಲಿ ಶುಚಿತ್ವ ಕಾಪಾಡಲು ಒಂದು ವರ್ಷಕ್ಕೆ 10 ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳ 13 ಪ್ಯಾಕ್‌ಗಳನ್ನು ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.
- **ಜೆನೆರಿಕ್ ಔಷಧಗಳು:–** ರಾಜ್ಯದ ಜನತೆಗೆ ವೆಚ್ಚವನ್ನು ಕಡಿಮೆಗೊಳಿಸಲು ಜೆನೆರಿಕ್ ಔಷಧಗಳು ಬ್ರಾಂಡೆಡ್ ಔಷಧಿಗಳಿಗಿಂತ ಶೇ.40 ರಿಂದ ಶೇ.50ರಷ್ಟು ಅಗ್ಗವಾಗಿವೆ. ಆದುದರಿಂದ ಪ್ರತಿ ತಾಲ್ಲೂಕಿಗೆ ಒಂದರಂತೆ ಜೆನೆರಿಕ್ ಔಷಧಿಗಳ ಮಳಿಗೆಗಳನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ.
- **ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ:–** ಆರೋಗ್ಯ ಇಲಾಖೆ ಮತ್ತು ಸಮುದಾಯದೊಂದಿಗೆ ಆಶಾ ಕಾರ್ಯಕರ್ತೆಯರು ಮಧ್ಯವರ್ತಿಯಾಗಿರುತ್ತಾರೆ. ಕೇಂದ್ರ ಸರ್ಕಾರದಿಂದ ಅವರಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಅವರುಗಳಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ಕಾರ್ಯನಿರ್ವಹಿಸಲು ಕೇಂದ್ರ ಸರ್ಕಾರವು ನೀಡುತ್ತಿರುವ ಪ್ರೋತ್ಸಾಹ ಧನದ ಜೊತೆಗೆ ರಾಜ್ಯ ಸರ್ಕಾರದಿಂದಲೂ ಸಹ ಸಮಾನವಾದ ಪ್ರೋತ್ಸಾಹ ಧನ ನೀಡಲಾಗುತ್ತಿದೆ.
- **ಡಯಾಲಿಸಿಸ್ ಕೇಂದ್ರಗಳು:–** ಪ್ರತಿ ಜಿಲ್ಲೆಯ ಜಿಲ್ಲಾ ಆಸ್ಪತ್ರೆಯಲ್ಲಿ ಒಂದು ಡಯಾಲಿಸಿಸ್ ಘಟಕ ಸ್ಥಾಪಿಸಲಾಗಿದ್ದು ಡಯಾಲಿಸಿಸ್ ಸೌಲಭ್ಯಗಳಿಗಾಗಿ ಹೆಚ್ಚು ಬೇಡಿಕೆ ಇರುತ್ತದೆ. ಈ ಬೇಡಿಕೆಯನ್ನು ಪೂರೈಸಲು ಪ್ರತಿ ಜಿಲ್ಲೆಯ ಒಂದು ತಾಲ್ಲೂಕು ಆಸ್ಪತ್ರೆಯಲ್ಲಿ ಡಯಾಲಿಸಿಸ್ ಘಟಕವನ್ನು ಸ್ಥಾಪಿಸಲಾಗಿದೆ.
- **ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಎಂಡೋಸಲ್ಫಾನ್ ಪೀಡಿತರ ಆರೋಗ್ಯ ಸುಧಾರಣೆಗಾಗಿ ಪುನರ್‌ವಸತಿ ಯೋಜನೆ:–** ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಎಂಡೋಸಲ್ಫಾನ್‌ನಿಂದ ಭಾಧಿತರಾದ ಜನರ

ಸಮೀಕ್ಷೆ ನಡೆಸಿ ಅವರಿಗೆ ಪುನರ್‌ವಸತಿ ಯೋಜನೆಯ ಮೂಲಕ ಶಾಶ್ವತ ಪರಿಹಾರ ನೀಡಲಾಗುತ್ತಿದೆ.

- **ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಸಮುದಾಯ ಮಾನಸಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ:–** ರಾಜ್ಯದಲ್ಲಿ ತೀವ್ರವಾದ ಮಾನಸಿಕ ಖಾಯಿಲೆಯುಳ್ಳ ರೋಗಿಗಳ ಆರೈಕೆಗೆ ಲಭ್ಯವಿರುವ ಹಾಸಿಗೆಗಳ ಸಂಖ್ಯೆ ಕಡಿಮೆಯಿದೆ. ಆದ್ದರಿಂದ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಒಂದರಂತೆ ಮಾನಸಿಕ ರೋಗಿಗಳಿಗೆ ವಸತಿ ಸೌಲಭ್ಯವುಳ್ಳ ಪಾಲನಾ ಕೇಂದ್ರಗಳನ್ನು ಸ್ಥಾಪಿಸಲು ನಿಮ್‌ಹ್ಯಾನ್ಸ್ (NIMHANS) ಮತ್ತು ದಿಮ್‌ಹ್ಯಾನ್ಸ್ (DIMHANS) ಇವರ ನೆರವಿನೊಂದಿಗೆ ಪ್ರತಿ ಕಂದಾಯ ವಿಭಾಗದಲ್ಲಿ ಸರ್ಕಾರೇತರ ಸಂಸ್ಥೆಯನ್ನು ಗುರುತಿಸಿ ಅವರ ಸಹಯೋಗದೊಂದಿಗೆ ನಡೆಸಲು ಕ್ರಮ ವಹಿಸಲಾಗುತ್ತಿದೆ.

- **ಆರೋಗ್ಯ ಕವಚ 108:–** ಈ ಯೋಜನೆಯಡಿ ವೈದ್ಯಕೀಯ, ಪೊಲೀಸ್ ಮತ್ತು ಅಗ್ನಿಶಾಮಕ ಘಟಕಗಳಿಗೆ ಸಂಬಂಧಿಸಿದಂತೆ ಯಾವುದೇ ತುರ್ತು ಸ್ಥಿತಿಯಲ್ಲಿ ಮೊಬೈಲ್ ಅಥವಾ ನೇರ ದೂರವಾಣಿ ಮೂಲಕ 108 ಕ್ಕೆ ಕರೆ ಮಾಡಿದಲ್ಲಿ ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಆಧುನಿಕ ಉಪಕರಣಗಳನ್ನು ಒಳಗೊಂಡ ಆಂಬ್ಯುಲೆನ್ಸ್ ವಾಹನವು ಘಟನೆಯ ಸ್ಥಳಕ್ಕೆ ತೆರಳಿ, ತುರ್ತು ಪ್ರಾಥಮಿಕ ಚಿಕಿತ್ಸೆ ನೀಡುವ ಮೂಲಕ ರೋಗಿಯ ಆರೋಗ್ಯವನ್ನು ಸುಧಾರಿಸಿ ತದನಂತರ ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ 2014–15 ನೇ ಸಾಲಿನಲ್ಲಿ ನವೆಂಬರ್ ಅಂತ್ಯದವರೆಗಿನ ಫಲಾನುಭವಿಗಳು 398468. ಈ ಯೋಜನೆಯಡಿ ಈಗಾಗಲೇ 517 ಆಂಬ್ಯುಲೆನ್ಸ್ ವಾಹನಗಳನ್ನು ಒದಗಿಸಲಾಗಿದ್ದು, 2011ರ ಜನಗಣತಿ ಆಧಾರದ ಮೇಲೆ ಅಗತ್ಯವಿರುವ ಹೆಚ್ಚುವರಿ 198 ಆಂಬ್ಯುಲೆನ್ಸ್ ವಾಹನಗಳನ್ನು ಒದಗಿಸಲಾಗಿದೆ. ಇದಲ್ಲದೆ ನಗು–ಮಗು ಯೋಜನೆಯಡಿ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಯಾದ ನಂತರ ಶಿಶು

ಮತ್ತು ಬಾಣಂತಿಯನ್ನು ಸುರಕ್ಷಿತವಾಗಿ ಮತ್ತು ಉಚಿತವಾಗಿ ಮನೆಗೆ ತಲುಪಿಸಲು 200 ವಾಹನಗಳನ್ನು ನೀಡಲಾಗಿದೆ.

- **ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ, ಮತ್ತು ಸಂಜಯಗಾಂಧಿ ಟ್ರಾಮಾ ಮತ್ತು ಆರ್ಥೋಪೆಡಿಕ್ ಆಸ್ಪತ್ರೆಗಳಲ್ಲಿ ಇ–ಹಾಸ್ಪಿಟಲ್ ಸ್ಥಾಪನೆ:–** ಕೆ.ಸಿ.ಜನರಲ್ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ ಮತ್ತು ಸಂಜಯಗಾಂಧಿ ಅಪಘಾತ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಗಳಲ್ಲಿ ಇ–ಆಸ್ಪತ್ರೆ ತಂತ್ರಾಂಶವನ್ನು ಅಳವಡಿಸಲು ಕ್ರಮ ವಹಿಸಲಾಗುತ್ತಿದೆ.
- **ಬೆಳಗಾವಿ ಮತ್ತು ಮೈಸೂರಿನ ಪ್ರಾದೇಶಿಕ ಆಹಾರ ಪ್ರಯೋಗಾಲಯಗಳನ್ನು ಉನ್ನತೀಕರಿಸುವ ಬಗ್ಗೆ:–** ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ನವದೆಹಲಿ ಇವರ ಸಹಯೋಗದೊಂದಿಗೆ ಬೆಳಗಾವಿ ಮತ್ತು ಮೈಸೂರಿನ ಪ್ರಾದೇಶಿಕ ಆಹಾರ ಪ್ರಯೋಗಾಲಯಗಳನ್ನು ಉನ್ನತೀಕರಿಸಲು National Accreditaion Board of Laboratories (NABL) ಅರ್ಹತೆಗೆ ಮೇಲ್ದರ್ಜೆಗೇರಿಸಲು ಸರ್ಕಾರವು ಮಂಜೂರಾತಿ ನೀಡಿದೆ. ಇದಕ್ಕಾಗಿ ರಾಜ್ಯ ಸರ್ಕಾರವು ಶೇಕಡ 25ರಷ್ಟು ವೆಚ್ಚವನ್ನು ಭರಿಸುತ್ತದೆ.
- **ಕೇಂದ್ರ ಸರ್ಕಾರದ ನೆರವಿನೊಂದಿಗೆ ನಗರ ಪ್ರದೇಶಗಳಲ್ಲಿ ಎನ್.ಯು.ಹೆಚ್.ಎಂ. ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ:–** ರಾಜ್ಯದ 1) ಬೆಂಗಳೂರು ನಗರ, 2) ಮೈಸೂರು ನಗರ, 3) ಬಾಗಲಕೋಟೆ ನಗರ, 4) ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಪಟ್ಟಣ ಈ ನಾಲ್ಕು ನಗರ/ಪಟ್ಟಣ ಪ್ರದೇಶಗಳಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ಮಂಜೂರಾತಿ ನೀಡಿದೆ.
- ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುತ್ತಿದೆ.

- **ಬಡತನ ರೇಖೆಗಿಂತ ಕೆಳಗಿರುವ ಹಿರಿಯ ನಾಗರೀಕರ ದಂತ ಆರೋಗ್ಯ:** 60 ವರ್ಷ ಮೇಲ್ಪಟ್ಟ ಬಡತನ ರೇಖೆಗಿಂತ ಕೆಳಗಿರುವ ಹಿರಿಯ ನಾಗರಿಕರಿಗೆ ಓರಲ್ ಹೆಲ್ತ್ ಪಾಲಿಸಿಯ ಯೋಜನೆಯಡಿಯಲ್ಲಿ ಉಚಿತವಾಗಿ ಕೃತಕ ದಂತ ಪಂಕ್ತಿ (Denture) ನೀಡಲಾಗುತ್ತಿದೆ.
- **ಮುಖ್ಯಮಂತ್ರಿಗಳ "ಸಾಂತ್ವನ" ಯೋಜನೆ:** ವ್ಯಕ್ತಿಯು ರಸ್ತೆ ಅಪಘಾತಕ್ಕೊಳಗಾದಲ್ಲಿ ಅಪಘಾತದ ಅತ್ಯಮೂಲ್ಯ ಗಳಿಗೆಯಲ್ಲಿ ಸರ್ಕಾರದಿಂದ ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಗಾಗಿ ಸೇರಿಸಲಾದ ವ್ಯಕ್ತಿಗೆ ಮುಖ್ಯಮಂತ್ರಿಗಳ "ಸಾಂತ್ವನ" ಯೋಜನೆಯಡಿಯಲ್ಲಿ 25 ಸಾವಿರ ರೂ.ಗಳವರೆಗೆ ಪರಿಹಾರ ಧನವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ.
- ಇತ್ತೀಚೆಗೆ ಅತಿ ವಿರಳ ಕಾಯಿಲೆಗಳಾದ ಹಿಮೋಫೀಲಿಯಾ, ತಲಸೀಮಿಯ, ಸಿಕಲ್‌ಸೆಲ್ ಅನಿಮಿಯಾ ಮತ್ತು ಪ್ರೈಮರಿ ಇಮ್ಯೂನೋ ಡಿಫಿಶಿಯೆನ್ಸಿ ಕಾಯಿಲೆಗಳು ಜನ ಸಾಮಾನ್ಯರಲ್ಲಿ ಕಂಡು ಬರುತ್ತಿದ್ದು, ಈ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಔಷಧಿಗಳು ಹಾಗೂ ಚಿಕಿತ್ಸೆಯನ್ನು ನೀಡಲು ಇಂದಿರಾ ಗಾಂಧಿ ಇನ್ಸ್‌ಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್ ಹಾಗು ಇತರ ಪ್ರಮುಖ ಆಸ್ಪತ್ರೆಗಳಾದ ವಾಣಿವಿಲಾಸ ಮಕ್ಕಳ ಆಸ್ಪತ್ರೆ, ಬೌರಿಂಗ್ ಮತ್ತು ಲೇಡಿ ಕರ್ಜನ್‌ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಮೈಸೂರು, ವೆನ್‌ಲಾಕ್ ಆಸ್ಪತ್ರೆ ಮಂಗಳೂರು, ಕಿಮ್ಸ್ ವೈದ್ಯಕೀಯ ಕಾಲೇಜು ಆಸ್ಪತ್ರೆ, ಹುಬ್ಬಳ್ಳಿ ಮತ್ತು ವಿಮ್ಸ್ ವೈದ್ಯಕೀಯ ಕಾಲೇಜು ಆಸ್ಪತ್ರೆ, ಬಳ್ಳಾರಿ, ಇವುಗಳಲ್ಲಿ ನಡೆಸಲು ಕ್ರಮ ವಹಿಸಲಾಗುತ್ತಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಡಾ॥ಗುರುಪಾದಪ್ಪ ನಾಗಮಾರಪಳ್ಳಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1928ಕ್ಕೆ ಅನುಬಂಧ-2

ಕ್ರ ಸಂ.	ಯೋಜನೆಗಳ ಹೆಸರು ಮತ್ತು ಲೆಕ್ಕಶೀರ್ಷಿಕೆ	ಕೇಂದ್ರ/ರಾಜ್ಯ ವಲಯ	2014-15ನೇ ಸಾಲಿನ ಆಯವ್ಯಯ
1	2	3	4
1	ಕರ್ನಾಟಕ ರಾಜ್ಯ ಡ್ರಗ್, ಲಾಜಿಸ್ಟಿಕ್ ಮತ್ತು ವೇರ್ ಹೌಸಿಂಗ್ ಸೊಸೈಟಿ 2210-01-104-0-01	ರಾಜ್ಯ ವಲಯ	2000.00
2	ಕಾಲೇಜು ಆಸ್ಪತ್ರೆಗಳು 2210-01-110-1-18	ರಾಜ್ಯ ವಲಯ	312.13
3	ಆರೋಗ್ಯ ಇಲಾಖೆ ಕಟ್ಟಡಗಳು 2210-01-110-1-21	ರಾಜ್ಯ ವಲಯ	75.00
4	ಮನೋರೋಗ ಚಿಕಿತ್ಸಾಲಯಗಳು, ಸಾಂ.ರೋ.ಟಿ.ವಿ. ಪ್ರಧಾನ ಮತ್ತು ಜಿಲ್ಲಾ ಆಸ್ಪತ್ರೆಗಳು 2210-01-110-1-22	ರಾಜ್ಯ ವಲಯ	20180.37
5	ಸಂಜಯಗಾಂಧಿ ಟ್ರಾಮ ಮತ್ತು ಆಸ್ಥಿ ಚಿಕಿತ್ಸಾ ಸಂಸ್ಥೆ 2210-01-110-2-16	ರಾಜ್ಯ ವಲಯ	325.00
6	ವೃದ್ಧಾಪ್ಯ ಆರೋಗ್ಯ ಸೇವೆಗಳು 2210-01-110-2-41	ರಾಜ್ಯ ವಲಯ	158.68
7	ಕೆ.ಸಿ ಜನರಲ್ ಆಸ್ಪತ್ರೆ ಸಂಜಯ್ ಗಾಂಧಿ ಅಪಘಾತ ಆರೈಕೆ ಕೇಂದ್ರ ಹಾಗೂ ಜಯನಗರ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಇ - ಆಸ್ಪತ್ರೆ ತಂತ್ರಾಂಶ ಅನುಷ್ಠಾನ 2210-01-110-2-44	ರಾಜ್ಯ ವಲಯ	81.80
8	ಶುಚಿ ಯೋಜನೆ 2210-01-200-0-04	ರಾಜ್ಯ ವಲಯ	3658.43

9	ಎಲ್ಲಾ ಜಿಲ್ಲೆಗಳಲ್ಲಿ ಸಮುದಾಯ ಮಾನಸಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ 2210-03-104-0-02	ರಾಜ್ಯ ವಲಯ	100.00
10	ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿನ ಮೇಲ್ದರ್ಜೆಗೇರಿಸಲಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಲಕರಣೆಗಳ ಖರೀದಿ 2210-03-110-0-07 - SDP	ರಾಜ್ಯ ವಲಯ	300.00
11	ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಘಟಕಗಳ ಸ್ಥಾಪನೆ 2210-03-110-0-08	ರಾಜ್ಯ ವಲಯ	500.00
12	ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಂಡಳಿ 2210-03-800-0-18 (ರಾಜ್ಯ ಪಾಲು - 30863.25)+(ಕೇಂದ್ರ ಪಾಲು-92589.75)	ರಾಜ್ಯ ವಲಯ	123453.00
13	ರಾಷ್ಟ್ರೀಯ ನಗರ ಆರೋಗ್ಯ ಆಭಿಯಾನ (ರಾಜ್ಯ ಪಾಲು - 3841.25) + (ಕೇಂದ್ರ ಪಾಲು-11523.75) 2210-03-800-0-19	ರಾಜ್ಯ ವಲಯ	15365.00
14	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ 2210-06-001-0-01	ರಾಜ್ಯ ವಲಯ	117.83
15	ಆರೋಗ್ಯ ಮಾಹಿತಿ ಶಿಕ್ಷಣ [illegible] 2210-06-001-0-05	ರಾಜ್ಯ ವಲಯ	[illegible]

16	ಕರ್ನಾಟಕ ರಾಜ್ಯ ಏಡ್ಸ್ ನಿವಾರಣಾ ಸಂಘ 2210-06-101-7-15	ರಾಜ್ಯ ವಲಯ	200.00
17	ಗರ್ಭಾಶಯ ರೋಗಗಳು 2210-06-101-7-16	ರಾಜ್ಯ ವಲಯ	50.00
18	ಹಚ್.ಐ.ವಿ. ಸೋಂಕಿತ ವ್ಯಕ್ತಿಗಳಿಗೆ ಉಚಿತ ಸಾರಿಗೆ ಸೌಲಭ್ಯ 2210-06-101-7-17	ರಾಜ್ಯ ವಲಯ	100.00
19	ಹಚ್.ಐ.ವಿ/ಏಯ್ಡ್ಸ್ ಹೆಚ್ಚು ಪ್ರಚಲಿತವಿರುವ ಕರ್ನಾಟಕದ ಜಿಲ್ಲೆಗಳಲ್ಲಿ ರೋಗವನ್ನು ಹತ್ತಿಕ್ಕಲು ಲಿಂಕ್ ಕಾರ್ಯಕ್ರಮ ಯೋಜನೆ ಮುಂದುವರಿಕೆ 2210-06-101-7-18	ರಾಜ್ಯ ವಲಯ	200.00
20	ಎಂಡೋಸಲ್ಫಾನ್ ಪೀಡಿತರ ಆರೋಗ್ಯ ಸುಧಾರಣೆ 2210-06-101-7-19	ರಾಜ್ಯ ವಲಯ	1000.00
21	ರಾಷ್ಟ್ರೀಯ ಅಂಧತ್ವ ನಿವಾರಣೆ ಮತ್ತು ನಿಯಂತ್ರಣಾ ಕಾರ್ಯಕ್ರಮ 2210-06-101-8-02	ರಾಜ್ಯ ವಲಯ	330.00
22	ಜೆನರಿಕ್ ಮಳಿಗೆಗಳ ಸ್ಥಾಪನೆ 2210-06-104-0-14	ರಾಜ್ಯ ವಲಯ	250.00
23	ವ್ಯಾಕ್ಸೀನ್ ತಯಾರಿಕಾ ಸಂಸ್ಥೆ ಬೆಳಗಾಂ 2210-06-106-0-01	ರಾಜ್ಯ ವಲಯ	5.00
24	ಜನಾರೋಗ್ಯ ಸಂಸ್ಥೆ, ಬೆಂಗಳೂರು 2210-06-107-0-01	ರಾಜ್ಯ ವಲಯ	400.00
25	ಮೈಸೂರು ಮತ್ತು ಬೆಳಗಾವಿಯಲ್ಲಿ ಆಹಾರ ಪರೀಕ್ಷಾ 2210-06-107-0-08	ರಾಜ್ಯ ವಲಯ	800.00

26	ಪೌಷ್ಟಿಕ ಆಹಾರ ಐ.ಇ.ಸಿ 2210-06-800-0-13	ರಾಜ್ಯ ವಲಯ	50.00
27	ಕ್ಷಯ ಮತ್ತು ಎಚ್‌ಐವಿ ಸೋಂಕಿತ ರೋಗಿಗಳಿಗೆ ಪೌಷ್ಟಿಕ ನೆರವು ಇತರೆ ಖರ್ಚುಗಳು 2210-06-800-0-14	ರಾಜ್ಯ ವಲಯ	500.00
28	ಬಡತನ ರೇಖೆಗಿಂತ ಕೆಳಗಿರುವ ಹಿರಿಯ ನಾಗರೀಕರ ದಂತ ಆರೋಗ್ಯ 2210-06-800-0-15	ರಾಜ್ಯ ವಲಯ	200.00
29	ಸುವರ್ಣ ಆರೋಗ್ಯ ಸುರಕ್ಷಾ 2210-80-001-0-01	ರಾಜ್ಯ ವಲಯ	14000.00
30	ಸುಟ್ಟಗಾಯ ಮತ್ತು ಡಯಾಲಿಸಿಸ್ 2210-80-001-0-02	ರಾಜ್ಯ ವಲಯ	600 00
31	ರಾಜೀವ್ ಆರೋಗ್ಯ ಭಾಗ್ಯ 2210-80-001-0-03	ರಾಜ್ಯ ವಲಯ	1500.00
32	ಸಮಗ್ರ ಮಾತೃ ಆರೋಗ್ಯ ಪಾಲನೆ(ಪಾಯು ಭಾಗ್ಯ) 2210-80-800-0-17	ರಾಜ್ಯ ವಲಯ	5200.00
33	ಇ.ಎಂ.ಆರ್.ಐ ಸ್ಥಾಪನೆ (ಆರೋಗ್ಯ ಕವಚ) 2210-80-800-0-18	ರಾಜ್ಯ ವಲಯ	12486.00
34	ಆಹಾರ ಸುರಕ್ಷತೆ ಕಾರ್ಯಕ್ರಮ 2210-80-800-0-24	ರಾಜ್ಯ ವಲಯ	500.00
35	ಮುಖ್ಯಮಂತ್ರಿಗಳ ಸಾಂತ್ವನ ಯೋಜನೆ 2210-80-800-0-25	ರಾಜ್ಯ ವಲಯ	500.00
36	ಕೆಡಿಪಿಗಳು 2210- -80-1-01	ರಾಜ್ಯ ವಲಯ	11956.62

37	ಮಂಗಳೂರಿನಲ್ಲಿ ಸಾರ್ವಜನಿಕ ಆಸ್ಪತ್ರೆ ಸ್ಥಾಪನೆ (ಪ್ರಾಸ ಪಾಮಾಲಿನು) 4210-01-110-1-06	ರಾಜ್ಯ ಪಲಯ	147.00
38	ಜಿಲ್ಲಾ ಆಸ್ಪತ್ರೆ ಗುಲ್ಬರ್ಗಾ ಮತ್ತು ಜಾಮರಾಜನಗರ 4210-01-110-1-08	ರಾಜ್ಯ ಪಲಯ	500.00
39	ಗದಗದಲ್ಲಿರುವ ಸರ್ಕಾರಿ ಹೆರಿಗೆ ಆಸ್ಪತ್ರೆಯ ವಿಸ್ತರಣೆ ಹಾಗೂ ಆಧುನೀಕರಣ 4210-01-110-1-18	ರಾಜ್ಯ ಪಲಯ	400.00
40	ಆಸ್ಪತ್ರೆಗಳ ನಿರ್ಮಾಣ-ನಬಾರ್ಡ್ 4210-01-110-1-19	ರಾಜ್ಯ ಪಲಯ	10033.13
41	ಆರೋಗ್ಯ ಭವನ 4210-04-200-1-02	ರಾಜ್ಯ ಪಲಯ	1700.00
42	ಕೆ.ಹೆಚ್.ಎಸ್.ಡಿ.ಆರ್.ಪಿ ಸಾಂಸ್ಥಿಕ ಅಭಿವೃದ್ಧಿ 2210-06-003-0-11	ರಾಜ್ಯ ಪಲಯ	830.00
43	ಕೆ.ಹೆಚ್.ಎಸ್.ಡಿ.ಆರ್.ಪಿ. ಸಾರ್ವಜನಿಕ ಆರೋಗ್ಯ ಸ್ಪರ್ಧಾ ನಿಧಿ 2210-06-112-0-02	ರಾಜ್ಯ ಪಲಯ	800.00
44	ಕೆ.ಹೆಚ್.ಎಸ್.ಡಿ.ಆರ್.ಪಿ ಆರೋಗ್ಯ ಹಣಕಾಸು 2210-06-112-0-03	ರಾಜ್ಯ ಪಲಯ	2870.00
45	ಕೆ.ಹೆಚ್.ಡಿ.ಆರ್.ಪಿ ಯೋಜನಾ ನಿರ್ವಹಣೆ ಮತ್ತು ಮೌಲ್ಯಮಾಪನ 2210-06-101-1-08	ರಾಜ್ಯ ಪಲಯ	1761 51
46	ಕೆ.ಹೆಚ್.ಎಸ್ ಡಿ.ಆರ್.ಪಿ ಸುಧಾರಣಾ ಸವಾಲು ನಿಧಿ 2210-06-112-0-04	ರಾಜ್ಯ ಪಲಯ	1983.49

47	ಕೆ.ಹೆಚ್.ಡಿ.ಆರ್.ಪಿ (ಯೋಜನಾ) 4210-01-110-1-86	ರಾಜ್ಯ ವಲಯ	55.00
48	ಕೆ.ಹೆಚ್.ಡಿ.ಆರ್ ಪಿ (ಸೇವೆ) 4210-01-110-1-87	ರಾಜ್ಯ ವಲಯ	8300.00
49	ರಾಷ್ಟ್ರೀಯ ಮಲೇರಿಯಾ ನಿರೋಧ ಕಾರ್ಯಕ್ರಮ (ನಗರ) 2210-06-101-1-03	ಕೇಂದ್ರ ವಲಯ	75.00
50	ಗಿನಿಯಿ ಜಂತು ನಿರ್ಮೂಲನ ಕಾರ್ಯಕ್ರಮ 2210-06-101-7-06	ರಾಜ್ಯ ಮತ್ತು ಕೇಂದ್ರ ವಲಯ	7.00
51	ರಾಷ್ಟ್ರೀಯ ಆಯೋಡಿನ್ ಕೊರತೆ ನಿಯಂತ್ರಣ ಕಾರ್ಯಕ್ರಮ 2210-06-101-7-10	ಕೇಂದ್ರ ವಲಯ	51.80
52	ಸಮಗ್ರ ರೋಗಗಳ ಪರಿವೀಕ್ಷಣಾ ಕಾರ್ಯಕ್ರಮ 2210-06-101-7-14	ಕೇಂದ್ರ ವಲಯ	89.20
53	ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ 2210-06-101-7-20	ಕೇಂದ್ರ ವಲಯ	14590.48
ಒಟ್ಟು ರಾಜ್ಯ ವಲಯ ಹಾಗೂ ಕೇಂದ್ರ ವಲಯ			262329.49
ಕೇಂದ್ರ ವಲಯ ಯೋಜನೆಗಳು			(ಲಕ್ಷ ರೂ.ಗಳಲ್ಲಿ)
1	ರಾಷ್ಟ್ರೀಯ ಮಲೇರಿಯಾ ನಿರೋಧ ಕಾರ್ಯಕ್ರಮ (ನಗರ) 2210-06-101-1-03	ಕೇಂದ್ರ ವಲಯ	75.00
2	ಗಿನಿಯಿ ಜಂತು ನಿರ್ಮೂಲನ ಕಾರ್ಯಕ್ರಮ 2210-06-101-7-06	ಕೇಂದ್ರ ವಲಯ	7.50

3	ರಾಷ್ಟ್ರೀಯ ಆಯುಷ್ ಮಿಷನ್ ಹೊರತು ನಿಯಂತ್ರಣ ಕಾರ್ಯಕ್ರಮ 2210-06-101-7-10	ಕೇಂದ್ರ ವಲಯ	51.80
4	ಸಮಗ್ರ ರೋಗಗಳ ಪರಿಶೋಧನಾ ಕಾರ್ಯಕ್ರಮ 2210-06-101-7-14	ಕೇಂದ್ರ ವಲಯ	89.20
5	ಮೈಸೂರು ಮತ್ತು ಬೆಳಗಾವಿಯಲ್ಲಿ ಆಯುಷ ಪರೀಕ್ಷಾ 2210-06-107-0-08	ಕೇಂದ್ರ ವಲಯ	600.00
6	ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ 2210-03-800-0-18 (ಕೇಂದ್ರ ಪಾಲು)	ಕೇಂದ್ರ ವಲಯ	92589.75
7	ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ (ಕೇಂದ್ರ ಪಾಲು) 2210-03-800-0-19	ಕೇಂದ್ರ ವಲಯ	11523.75
8	ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ 2210-06-101-7-20	ಕೇಂದ್ರ ವಲಯ	14590.48
	ಒಟ್ಟು ಕೇಂದ್ರ ವಲಯ		119523.48

ಮಾನ್ಯ ವಿಧಾನ ಸಭಾ ಸದಸ್ಯರಾದ ಡಾ॥ಗುರುಪಾದಪ್ಪ ನಾಗಮಾರಪಳ್ಳಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1928ಕ್ಕೆ ಅನುಬಂಧ-3

ಆಯುಷ್ ಇಲಾಖೆ

ಕ್ರ ಸಂ	ಜಿಲ್ಲೆಯ ಹೆಸರು	ನಿಗದಿಯಾದ ಕಾರ್ಯಕ್ರಮಗಳ ಸಂಖ್ಯೆ	ಮಾಡಲಾದ ವೆಚ್ಚ	ಫಲಾನುಭವಿಗಳ ಸಂಖ್ಯೆ
1	ಬೆಂಗಳೂರು (ಗ್ರಾ & ನಗರ)	22	9.70	2110
2	ಕೋಲಾರ	20	2.85	1754
3	ತುಮಕೂರು	08	4.83	1389
4	ಶಿವಮೊಗ್ಗ	49	19.36	3230
5	ಚಿತ್ರದುರ್ಗ	13	8.45	1635
6	ದಾವಣಗೆರೆ	29	15.33	2908
7	ಮೈಸೂರು	38	9.84	3430
8	ಚಾಮರಾಜನಗರ	17	11.00	1185
9	ಹಾಸನ	40	13.61	2321
10	ಮಂಡ್ಯ	28	15.36	3387
11	ಕೊಡಗು	46	12.50	4317
12	ಚಿಕ್ಕಮಗಳೂರು	16	11.83	2708
13	ಉಡುಪಿ	34	7.90	4757
14	ದಕ್ಷಿಣ ಕನ್ನಡ	47	14.79	3704
15	ಬೆಳಗಾಂ	50	23.89	3112
16	ಧಾರವಾಡ	22	11.61	2006

17	ಗದಗ	18	12.16	1845
18	ಹಾವೇರಿ	29	14.23	2421
19	ಬಿಜಾಪುರ	16	10.00	1183
20	ಬಾಗಲಕೋಟೆ	35	13.50	3850
21	ಉತ್ತರ ಕನ್ನಡ	23	20.49	2119
22	ಗುಲ್ಬರ್ಗಾ	34	13.36	2499
23	ರಾಯಚೂರು	15	7.34	1853
24	ಕೊಪ್ಪಳ	21	8.00	2638
25	ಧಾರವಾಡ	18	12.68	2185
26	ಬಳ್ಳಾರಿ	43	15.76	3022
27	ರಾಮನಗರ	26	6.29	3355
28	ಚಿಕ್ಕಬಳ್ಳಾಪುರ	29	12.14	3917
29	ಚಿಕ್ಕಬಗಿರಿ	12	9.00	1820